# ಕೃತಿಯಂತೆ ಗತಿ

**ಸ್ವಾಮಿ ಶಿವದೇವಾನಂದ**

ಬ್ರಹ್ಮಲೀನ ಸ್ವಾಮಿ ಶಿವದೇವಾನಂದಜೀಯವರು ಶ್ರೀರಾಮಕೃಷ್ಣರ ಪರಮಭಕ್ತರು. ಬಿಡಿ ಸಂನ್ಯಾಸಿಗಳಾಗಿ ದಾವಣಗೆರೆಯಲ್ಲಿ ನೆಲೆಸಿದ್ದ ಅವರು ಪ್ರಸಿದ್ಧ ವಿದ್ವಾಂಸರೂ ವಾಗ್ಮಿಗಳೂ ಆಗಿದ್ದುದು ಮಾತ್ರವಲ್ಲದೆ ಉತ್ತಮ ಸಾಧಕರೂ ಆಗಿದ್ದರು. ದಾವಣಗೆರೆ, ಬಳ್ಳಾರಿ ಮುಂತಾದ ಸ್ಥಳಗಳಲ್ಲಿ ಶ್ರೀರಾಮಕೃಷ್ಣರ ಭಾವಪ್ರಚಾರ ಕಾರ್ಯವನ್ನು ಯಶಸ್ವಿಯಾಗಿ ಮಾಡುತ್ತಿದ್ದರು. ೩೦.೪. ೨೦೦೧ ರಂದು ತಮ್ಮ ೪೭ನೆ ವಯಸ್ಸಿನಲ್ಲಿ ಅವರ ಹಠಾತ್ ನಿಧನ ಭಕ್ತರನೇಕರನ್ನು ದುಃಖಕ್ಕೀಡುಮಾಡಿತು. ಈ ಲೇಖನ ಅವರ ಒಂದು ಉಪನ್ಯಾಸದ ಸಾರಾಂಶ.

**ಭಗವದ್ಗೀತೆಯಲ್ಲಿ** ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ (ಗೀತೆ ೩-೫) ಕರ್ಮವನ್ನು ಮಾಡದೆ ಯಾರೊಬ್ಬರೂ ಒಂದು ಕ್ಷಣವಾದರೂ ಇರಲಾರರು ಎಂದು ಹೇಳಿದೆ. ಮತ್ತೆ ಕೆಲವು ಶಾಸ್ತ್ರಗಳಲ್ಲಿ ಕರ್ಮಣಾ ಬಧ್ಯತೇ ಜಂತುಃ— ಕರ್ಮದಿಂದಲೇ ಜೀವಿಗಳು ಬಂಧನಕ್ಕೆ ಒಳಗಾಗುತ್ತಾರೆಂದೂ ಕರ್ಮಣಾ ಏವ ಮುಚ್ಯತೇ—ಕರ್ಮದಿಂದಲೇ ವಿಮುಕ್ತರಾಗುತ್ತಾರೆಂಬುದಾಗಿಯೂ ಹೇಳಲಾಗಿದೆ. ಈ ಮಾತುಗಳ ಅರ್ಥವೇನು? ಇವು ಸಾಧಕರ ಮನಸ್ಸಿನಲ್ಲಿ ಗೊಂದಲವನ್ನುಂಟುಮಾಡುವುದಿಲ್ಲವೇ? ಇದರ ಬಗ್ಗೆ ಸ್ವಲ್ಪ ಚಿಂತನವನ್ನು ಮಾಡಬೇಕಾಗಿದೆ.

ಕರ್ಮದಿಂದ ಬಂಧನವೂ ಇದೆ; ಮುಕ್ತಿಯೂ ಇದೆ. ಈ ಮಾತು ನಿಜ. ಹೇಗೆಂದರೆ, ಕತ್ತಿಯಿಂದ ಕತ್ತುಗಳನ್ನು ಕತ್ತರಿಸಿ ಜೈಲಿಗೂ ಹೋಗಬಹುದು; ಹಣ್ಣುತರಕಾರಿಗಳನ್ನು ಹೆಚ್ಚಿ ತಿಂದು ಆನಂದಿಸಲೂಬಹುದು. ಒಂದು ರೀತಿ ಮಾಡಿದರೆ ಕ್ಲೇಶ, ನಷ್ಟ; ಮತ್ತೊಂದು ರೀತಿ ಮಾಡಿದರೆ ಸುಖ, ಲಾಭ. "ನಡೆಯುವ ಕೆಲಸ ಒಂದೇ ಆದರೂ ಉತ್ತರಕ್ಕೆ ನಡೆದರೆ ಹಿಮಾಲಯವು ಸಿಗುತ್ತೆ, ದಕ್ಷಿಣಕ್ಕೆ ನಡೆದರೆ ಯಮಾಲಯವು ಸಿಗುತ್ತೆ" ಎಂಬುದಾಗಿ ನಮ್ಮ ಗುರುಗಳು ಆಗಾಗ್ಗೆ ಹೇಳುತ್ತಿದ್ದರು. ಬೀಗದ ಕೈ ಎಡಗಡೆ ತಿರುಗಿಸಿದರೆ ಬಂಧನ, ಬಲಕ್ಕೆ ತಿರುಗಿಸಿದರೆ ವಿಮೋಚನ; ತಿರುಗಿಸುವ ಕೆಲಸ ಮಾತ್ರ ಒಂದೇ. ಆಡುವ ಮಾತುಗಳು ಒಂದೇ ಆದರೂ "ಅಯ್ಯಾ! ಎಂದರೆ ಸ್ವರ್ಗ, ಎಲವೋ! ಎಂದರೆ ನರಕ"— ಎಂಬುದಾಗಿ ಬಸವೇಶ್ವರರು ಹೇಳಿಲ್ಲವೇ? ಹೀಗೆ ಕರ್ಮದ ಪರಿಣಾಮಗಳು ಉತ್ತರ ದಕ್ಷಿಣಗಳಂತೆ ವಿರುದ್ಧವಾಗಿಯೂ ಭಿನ್ನ ಭಿನ್ನವಾಗಿಯೂ ಇರುತ್ತವೆ. ಆದುದರಿಂದ ಕರ್ಮವನ್ನು ಮಾಡುವ ಮೊದಲೇ ಎಚ್ಚರವಾಗಿರಬೇಕು. ಕೈಸುಟ್ಟಮೇಲೆ ವ್ಯಥೆ ಪಟ್ಟರೆ ಪ್ರಯೋಜನವಿಲ್ಲ. "ಪಶ್ಚಾತ್ ತಾಪಕ್ಕಿಂತಲೂ ಪೂರ್ವತಾಪವೆ ಒಳ್ಳೆಯದು" ಎಂದು ಬಲ್ಲವರು ಹೇಳುತ್ತಾರೆ.

> **ಯಥಾ ಧೇನುಸಹಸ್ರೇಷು ವತ್ಸೋ ವಿಂದತಿ ಮಾತರಮ್ |**
> **ತಥಾ ಪುರಾಕೃತಂ ಕರ್ಮ ಕರ್ತಾರಮನುಗಚ್ಛತಿ ||**

"ಸಾವಿರಾರು ಹಸುಗಳಿದ್ದರೂ ಯಾವ ರೀತಿ ಒಂದು ಕರುವು ಅದರಲ್ಲಿ ತನ್ನ ತಾಯಿಯನ್ನೇ ಹುಡುಕಿಕೊಂಡು ಹೋಗಿ ಅದರ ಮೊಲೆ ಹಾಲನ್ನು ಕುಡಿಯುತ್ತದೋ ಹಾಗೆ ಪ್ರತಿಯೊಂದು ಕರ್ಮದ ಫಲವೂ ಅದರ ಕರ್ತನನ್ನು ಹುಡುಕಿಕೊಂಡು ಹೋಗಿ ಅವನನ್ನೇ ಸೇರುತ್ತದೆ." ಪುಣ್ಯಕರ್ಮವು ಸತ್ಫಲವನ್ನೂ ಸುಖವನ್ನೂ ಜ್ಞಾನವನ್ನೂ ಉಂಟುಮಾಡಿದರೆ ಪಾಪಕರ್ಮವು, ದುಷ್ಫಲವನ್ನೂ ದುಃಖವನ್ನೂ ಅಜ್ಞಾನವನ್ನೂ ಬೆಳೆಸುತ್ತದೆ.

ಯಾವುದು ಪುಣ್ಯ? ಯಾವುದು ಕರ್ತವ್ಯ? ಯಾವುದು ಅಕರ್ತವ್ಯ? ಎಂಬ ವಿಷಯದಲ್ಲಿ ಶಾಸ್ತ್ರವೇ ನಮಗೆ ಪ್ರಮಾಣವು—**ತಸ್ಮಾತ್ ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ** ಎಂದು ಭಗವದ್ಗೀತೆ ಹೇಳಿದೆ. ಇತರರು ನಮ್ಮ ವಿಷಯದಲ್ಲಿ ಹೇಗೆ ನಡೆದುಕೊಂಡರೆ ನಮಗೆ ಸಂತೋಷವಾಗುತ್ತದೋ ಅದೇ ರೀತಿ ನಾವು ಕೂಡ ಇತರರ ವಿಷಯದಲ್ಲಿ ನಡೆದುಕೊಳ್ಳಬೇಕು. ಅದೇ ಧರ್ಮವೆಂದು ನೀತಿಶಾಸ್ತ್ರವು ಹೇಳುತ್ತದೆ. ಮನಸಾ, ವಾಚಾ, ಕರ್ಮಣಾ ಎಲ್ಲರಿಗೂ ಒಳ್ಳೆಯದನ್ನೇ ಮಾಡಬೇಕು. "ಪರಸುಖವೇ ಸ್ವಸುಖಕ್ಕೆ ಹಾದಿ"(*The key to happiness is to make others happy*) ಎಂದು ಆಂಗ್ಲ ಭಾಷೆಯಲ್ಲಿ ರೂಢಿಮಾತಿದೆ.

> **ಯೇನ ಕೇನಾಪ್ಯುಪಾಯೇನ ಯಸ್ಯ ಕಸ್ಯಾಪಿ ದೇಹಿನಃ |**
> **ಸಂತೋಷಂ ಜನಯೇತ್ ಪ್ರಾಜ್ಞಃ ತದೇವೇಶ್ವರಪೂಜನಮ್ ||**

"ಯಾವುದೇ ಉಪಾಯದಿಂದಲಾದರೂ ಯಾವುದೇ ಒಂದು ಜೀವಿಗೆ ಸಂತೋಷವನ್ನುಂಟುಮಾಡಿದರೆ ಅದೇ ಈಶ್ವರ ಪೂಜೆ." ಆದರೆ ಒಬ್ಬರನ್ನು ಸಂತೋಷಗೊಳಿಸುವ ಆತುರದಲ್ಲಿ ಮತ್ತೊಬ್ಬರಿಗೆ ಇಚ್ಛಾಪೂರ್ವಕವಾಗಿ ಹಾನಿಯನ್ನು, ದುಃಖವನ್ನು ಉಂಟುಮಾಡಬಾರದು.

ಭಗವಂತನ ಈ ದಿವ್ಯ ಪ್ರಕೃತಿಯಲ್ಲಿ ಒಂದು ನಿಯಮವಿದೆ : ತಾನು ಮಾಡಿದ್ದೇ ತನಗೆ ಪ್ರತಿಧ್ವನಿಯಂತೆ ತಿರುಗಿ ಬರುತ್ತದೆ. ಕರ್ನಾಟಕದ ಬಿಜಾಪುರದಲ್ಲಿ "ಗೋಲ್ ಗುಮ್ಮಟ"ವೆಂಬುದೊಂದಿದೆ. ಅದರಲ್ಲಿ ಒಮ್ಮೆ ಶಬ್ದ ಮಾಡಿದರೆ ಏಳು ಬಾರಿ ಪ್ರತಿಧ್ವನಿ ಕೇಳಿಸುತ್ತದೆಂದು ಹೇಳುತ್ತಾರೆ. ಅಷ್ಟೇ ಅಲ್ಲದೇ ಪ್ರತಿಸಲವೂ ಧ್ವನಿಯ

**ನೀವು ದುಃಖಕ್ಕೆ ಹೆದರುವುದಾದರೆ, ದುಃಖವನ್ನು ಇಷ್ಟಪಡದಿದ್ದರೆ, ರಹಸ್ಯವಾಗಿಯಾಗಲಿ ಬಹಿರಂಗವಾಗಿಯಾಗಲಿ ದುಷ್ಕರ್ಮವನ್ನು ಮಾಡದಿರಿ. ನೀವು ದುಷ್ಕರ್ಮವನ್ನು ಮಾಡಿದ್ದರೆ ಅಥವಾ ಈಗ ಮಾಡಿದರೆ ನೀವು ಓಡಿಹೋಗಲು ಪ್ರಯತ್ನಿಸಿದರೂ ಕೂಡ ದುಃಖದಿಂದ ಪಾರಾಗಲಾರಿರಿ.** —ಬುದ್ಧ

ತೀವ್ರತೆ ವೃದ್ಧಿಯಾಗುತ್ತದೆಂದು ಸಹ ಹೇಳುವುದನ್ನು ಕೇಳಿದ್ದೇನೆ. ಅದರಂತೆಯೇ ನಾವು ಮಾಡುವ ಕರ್ಮವು ಸಹ ಹತ್ತರಷ್ಟು, ನೂರರಷ್ಟು, ಅಧಿಕವಾಗಿ ಕಾಲಾಂತರದಲ್ಲಿ ನಮಗೆ ತಿರುಗಿ ಬರುತ್ತದೆ. ಇದೊಂದು ಅಪರಿಹಾರ್ಯವಾದ ಪ್ರಕೃತಿ ನಿಯಮ. ಭೌತ ವಿಜ್ಞಾನದಲ್ಲಿಯೂ ಸಹ ಪ್ರತಿಯೊಂದು ಕ್ರಿಯೆಗೂ ಸಮಾನವೂ ವಿರುದ್ಧವೂ ಆದ ಪ್ರತಿಕ್ರಿಯೆ ಇದೆ (*Every action has got an equal and opposite reaction*) ಎಂಬ ನಿಯಮವನ್ನು ಹೇಳುತ್ತಾರೆ. "ನಾವು ಬಿತ್ತಿದ್ದನ್ನೇ ಬೆಳೆಯುತ್ತೇವೆ" (*As you sow so you reap*). ಬೇವಿನ ಬೀಜ ಬಿತ್ತಿದರೆ ಬೇವಿನ ಕಾಯಿಗಳು, ಮಾವಿನ ಬೀಜ ಬಿತ್ತಿದರೆ ಮಾವಿನಕಾಯಿಗಳು ಸಿಗುತ್ತವೆ—ಆದರೆ ಒಂದಕ್ಕೆ ನೂರು ಸಾವಿರ ಪಟ್ಟು ಅಧಿಕವಾಗಿ.

"ಮಾಡಿದ್ದುಣ್ಣೋ ಮಹರಾಯ" ಎಂಬ ಗಾದೆಯ ಮಾತು ಪ್ರಸಿದ್ಧ. ಬಹು ಜನರು ಪಾಪ ಕಾರ್ಯಗಳನ್ನು ಮಾಡುವಾಗ ಆನಂದವಾಗಿ ಮಾಡುತ್ತಾರೆ. ಆದರೆ ಅದರ ಫಲವನ್ನು ಅನುಭವಿಸ ಬೇಕಾದಾಗ "ಅಯ್ಯೋ! ನಮಗೆ ಎಂತಹ ದುಃಖವು ಬಂತು, ದೇವರಿಗೆ ಕರುಣೆಯಿಲ್ಲ, ಅವನಿಗೆ ಕಣ್ಣಿಲ್ಲ" ಎಂದು ನಾನಾ ರೀತಿಯಾಗಿ ಗೋಳಾಡುತ್ತಾರೆ. ಏನು ಗೋಳಾಡಿದರೂ ಕರ್ಮಫಲವನ್ನು ಅನುಭವಿಸಲೇಬೇಕು. ಮಾಡಿದ ಕರ್ಮವನ್ನು ನಾವು ಮರೆತರೂ ವಿಧಿ ಮರೆಯುವುದಿಲ್ಲ.

**ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂ ನೇಚ್ಛಂತಿ ಮಾನವಾಃ |**
**ಪಾಪಸ್ಯ ಫಲಂ ನೇಚ್ಛಂತಿ ಪಾಪಂ ಕುರ್ವಂತಿ ಯತ್ನತಃ ||**

"ಬಹು ಜನರು ಪುಣ್ಯಫಲವನ್ನು ಮಾತ್ರ ಬಯಸುತ್ತಾರೆ. ಪಾಪಫಲವಾದ ದುಃಖವನ್ನು ಬೇಡವೆನ್ನುತ್ತಾರೆ. ಆದರೆ ಪ್ರಯತ್ನ ಪೂರ್ವಕವಾಗಿ ಪಾಪವನ್ನೇ ಮಾಡುತ್ತಿರುತ್ತಾರೆ, ಆದರೆ ಪುಣ್ಯವನ್ನು ಮಾಡುವುದಿಲ್ಲ."

ಪರೀಕ್ಷಿತನು ಶಮೀಕ ಮುನಿಯ ಕೊರಳಿಗೆ ಸತ್ತ ಹಾವನ್ನು ಹಾಕುತ್ತಾನೆ. ಅದರ ಫಲವಾಗಿ ಬದುಕಿರುವ ಹಾವೇ (ತಕ್ಷಕನು) ಅವನಿಗೆ ಮೃತ್ಯುವಾಗಿ ಬರುತ್ತದೆ. ಇಲ್ಲಿ ಮುನಿಕುಮಾರನು ಪರೀಕ್ಷಿತನಿಗೆ ಶಾಪವನ್ನು ಕೊಟ್ಟನೆಂದು ಹೇಳುತ್ತಾರೆ. ಆದರೆ ಶಾಪವನ್ನಾಗಲಿ, ವರವನ್ನಾಗಲಿ ನಿರಾಧಾರವಾಗಿ ತಮ್ಮ ಮನಸ್ಸಿಗೆ ಬಂದಂತೆ ಯಾರು ಯಾರಿಗೂ ಕೊಡಲಿಕ್ಕೆ ಬರುವಂಥಾದ್ದಲ್ಲ. ಅನುಭಾವಿಗಳೂ ತ್ರಿಕಾಲದರ್ಶಿಗಳೂ ಆದ ಮುನಿಗಳು ನಮ್ಮ ದುಷ್ಕಾರ್ಯಕ್ಕೆ ಮುಂದೆ ಆಗಲಿರುವ ದುಷ್ಫಲವನ್ನು ಮೊದಲೇ ಘೋಷಿಸುತ್ತಾರೆ ಅಷ್ಟೇ. ಅದನ್ನೇ ನಾವು ಶಾಪವೆನ್ನುತ್ತೇವೆ. ಕರ್ಮದ ಗತಿಯನ್ನು ಬಲ್ಲ ಮಹಾತ್ಮರು ನಮ್ಮ ಸತ್ಕರ್ಮಗಳಿಗೆ ಮುಂದೆ ಆಗಲಿರುವ ಫಲವನ್ನು ಮೊದಲೇ ಘೋಷಿಸುತ್ತಾರೆ. ಅದನ್ನೇ ನಾವು ವರವೆನ್ನುತ್ತೇವೆ.

ಮಯಸಭೆಯಲ್ಲಿ ನೀರನ್ನು ನೆಲವಾಗಿಯೂ, ನೆಲವನ್ನು ನೀರಾಗಿಯೂ ಭ್ರಮೆಗೊಂಡು ಜಾರಿಬಿದ್ದ ದುರ್ಯೋಧನನನ್ನು ನೋಡಿ ದ್ರೌಪದಿ ನಕ್ಕಳು. ಅಭಿಮಾನಿಯಾದ ದುರ್ಯೋಧನನ ಮನಸ್ಸಿಗೆ ನೋವು, ಪರಾಭವವು ಉಂಟಾಯಿತು. ಫಲ ಸ್ವರೂಪವಾಗಿ ದ್ರೌಪದಿಯು ತುಂಬಿದ ಸಭೆಯಲ್ಲಿ ಪರಾಭವಿಸಲ್ಪಟ್ಟು ದುಃಖಿತಳಾದಳು. ಅಂದು ನಕ್ಕ ಫಲಕ್ಕಾಗಿ ಇಂದು ತಾನು ನಗೆಗೀಡಾದಳು. ಮತ್ತೊಂದು ವಿಷಯ ನೋಡಿ. ಸಾಧ್ವಿ ಮತ್ತು ಪತಿವ್ರತಾಶಿರೋಮಣಿಯಾದ ದ್ರೌಪದಿಯನ್ನು ಜೂಜಿನಲ್ಲಿ ಗೆದ್ದು ಮದಾಂಧನಾದ ದುರ್ಯೋಧನನು ಅವಳನ್ನು ತನ್ನ ತೊಡೆಯ ಮೇಲೆ ಕುಳಿತುಕೊಳ್ಳುವಂತೆ ಸಂಜ್ಞೆ ಮಾಡಿ ಕರೆಯುತ್ತಾನೆ. ಅದರ ಫಲವಾಗಿ ತಾನು ತೋರಿಸಿದ ತೊಡೆಯೇ ಭೀಮನ ಗದಾಘಾತದಿಂದ ಮುರಿದು ಕೊನೆಗೆ ಸಾಯುತ್ತಾನೆ.

ತಮ್ಮ ಕಷ್ಟಗಳನ್ನು ಭಗವಂತನಿಗೆ ನಿವೇದಿಸಿ ಅರ್ಥೈಸುವ ಪ್ರಯತ್ನದಲ್ಲಿ ಶರಣರು "ಓ ದೇವಾ, ನೀನೊಮ್ಮೆ ಕಾಯಗೊಂಡು ನೋಡಾ" ಎಂದಿದ್ದಾರೆ. ಕಾಯವನ್ನು ಧರಿಸಿ ಬಂದರೆ ದೇವರೂ ಸಹ ಈ ಮರ್ತ್ಯಲೋಕದ ಕರ್ಮನಿಯಮವನ್ನು ಅನುಸರಿಸಲೇ ಬೇಕಾಗುತ್ತದೇನೊ? ಕೆಲವು ಉದಾಹರಣೆಗಳನ್ನು ನೋಡಿ. ಶ್ರೀರಾಮನು ವಾಲಿಯನ್ನು ಬೇಟೆಗಾರನಂತೆ ಮರೆಯಿಂದ ಹೊಡೆದು ಕೊಲ್ಲುತ್ತಾನೆ. ಫಲಸ್ವರೂಪವಾಗಿ ಕೃಷ್ಣಾವತಾರದಲ್ಲಿ ತಾನೂ ಅದೇ ರೀತಿ ವ್ಯಾಧನ ಬಾಣದಿಂದ ಹೊಡೆಯಲ್ಪಟ್ಟು ದೇಹತ್ಯಾಗ ಮಾಡಬೇಕಾಗುತ್ತದೆ. ಸಾಕ್ಷಾತ್ ಭಗವಂತನಿಗೇ ಕರ್ಮ ನಿಯಮವು ತಪ್ಪಲಿಲ್ಲವೆಂದಮೇಲೆ ಸಾಮಾನ್ಯರ ವಿಷಯದಲ್ಲಿ ಹೇಳುವುದೇನಿದೆ ? ನಿಜವೇ, ಭಗವಂತನ ರಾಜ್ಯದಲ್ಲಿ ರಾಜನಿಗೂ ರಂಗನಿಗೂ ಒಂದೇ ನಿಯಮ.

ಸೀತೆ ಅರಣ್ಯದಲ್ಲಿರುವಾಗ ಕಾಂಚನ ಮೃಗವನ್ನು ಕಾಮಿಸಿದಳು. ರಾಮನು ಅದನ್ನು ತರಲು ಹೊರಗೆ ಹೋಗುತ್ತಾನೆ. ಹೃದಯದಲ್ಲಿ (ಸೀತೆಗೆ) ಕಾಮನೆ ಉದಯಿಸಿದ ಕೂಡಲೆ ಪಕ್ಕದಲ್ಲಿದ್ದ ರಾಮನು ದೂರವಾದನು. ಅಲ್ಲಿ ಜಿಂಕೆಯ ವೇಷದಲ್ಲಿದ್ದ ಮಾರೀಚನು ರಾಮನ ಬಾಣಕ್ಕೆ ತುತ್ತಾಗಿ ಸಾಯುತ್ತಾ, ಸ್ವಾಮಿ (ರಾವಣ) ಭಕ್ತಿಯಿಂದ ಕೊನೆಯ ಅಸ್ತ್ರವಾಗಿ "ಹಾ! ಲಕ್ಷ್ಮಣಾ!" ಎಂದು ರಾಮನ ಕಂಠಧ್ವನಿಯಿಂದ ಕೂಗಿ ಸಾಯುತ್ತಾನೆ. ಆ ಕೂಗು ಸೀತೆಗೂ ಲಕ್ಷ್ಮಣನಿಗೂ ಕೇಳಿಸುತ್ತದೆ. ಸೀತೆ ಗಾಬರಿಯಿಂದ "ರಾಮನಿಗೆ ಏನೋ ಪ್ರಮಾದವಾಗಿದೆ, ಹೋಗಿ ನೋಡು" ಎನ್ನುತ್ತಾಳೆ. ಲಕ್ಷ್ಮಣನಿಗೆ ಗೊತ್ತು ಅದು ರಾಮನ ಕಂಠವಲ್ಲವೆಂಬುದು. ರಾಮನ ಆಜ್ಞೆಯನ್ನು ಉಲ್ಲಂಘಿಸಿ ಸೀತೆಯನ್ನು ಒಂಟಿಯಾಗಿ ಬಿಟ್ಟು ಹೋದರೆ ಪ್ರಮಾದವು ಸಂಭವಿಸಬಹುದೆಂದು ಶಂಕಿಸಿ ಲಕ್ಷ್ಮಣನು ಸೀತೆಯ ಮಾತಿಗೆ ಕಿವಿಗೊಡಲಿಲ್ಲ, ಆ ಜಾಗವನ್ನು ಬಿಟ್ಟು ಕದಲಲಿಲ್ಲ. ಸೀತೆ ಕೋಪದಿಂದಲೂ ಸಂದೇಹದಿಂದಲೂ

"ರಾಮನು ಸತ್ತರೆ ರಾಮನ ರಾಜ್ಯವನ್ನು ಮತ್ತು ಪತ್ನಿಯನ್ನು ನಿನ್ನ ಸ್ವಾಧೀನ ಮಾಡಿಕೊಂಡು ಆಳಬಹುದೆಂಬ ದುರುದ್ದೇಶದಿಂದ ಕೂಡಿದ್ದೀಯ" ಎಂದು ನಿಂದಿಸುತ್ತಾಳೆ. ಫಲಸ್ವರೂಪವಾಗಿ ಆಕೆಯ ಮನೋವೃತ್ತಿಯಂತೆಯೇ ಲಕ್ಷ್ಮಣನ ರಕ್ಷಣೆಯನ್ನು ಕಳೆದುಕೊಂಡು ಕಾಮುಕನಾದ ರಾವಣನಿಂದ ಅಪಹರಿಸಲ್ಪಡುತ್ತಾಳೆ. ನಿಮ್ಮ ಮಾತೇ ನಿಮಗೆ ತಿರುಗಿ ಹೊಡೆಯುತ್ತದೆ. ನಿಮ್ಮ ಮಾತೇ ನಿಮಗೆ ಶಾಪವಾಗಬಹುದು. ಯಾವಾಗಲೂ ಕೆಟ್ಟದಾಗಿ ಮಾತನಾಡಬೇಡಿ. ಕಠಿಣವಾಗಿ, ಕರ್ಕಶವಾಗಿ ಮಾತನಾಡಬೇಡಿ. ಎಚ್ಚರವಿರಲಿ!

ಇವೆಲ್ಲಾ ಯಾವುವೋ ಪುರಾಣ ಕಥೆಗಳು ಅಂದುಕೊಳ್ಳಬೇಡಿ. ಇತ್ತೀಚೆಗೆ ಪ್ರತ್ಯಕ್ಷವಾಗಿ ನಡೆದ ಕಥೆಗಳು ಎಷ್ಟೋ ಇವೆ. ವರ್ಷಗಳ ಹಿಂದೆ ಬ್ರಿಟಿಷರ ಕಾಲದಲ್ಲಿ ನಡೆದಿದ್ದೆಂದು ಯಾರೋ ಹಿರಿಯರ ಬಾಯಿಂದ ಕೇಳಿದ್ದೆ. ಹುಬ್ಬಳ್ಳಿ ರೈಲ್ವೇ ನಿಲ್ದಾಣದಲ್ಲಿ ಒಬ್ಬ ವ್ಯಕ್ತಿ ಬೆಂಗಳೂರಿಗೆ ಹೋಗಬೇಕೆಂದು ಬೇಗ ಬೇಗ ಬಂದನಂತೆ. ಆ ದಿನವೇ ಜನಸಂದಣಿ ಹೆಚ್ಚಾಗಿದ್ದುದರಿಂದ ರೈಲಿನ ಎಲ್ಲಾ ಡಬ್ಬಿಗಳು ತುಂಬಿಹೋಗಿತ್ತಂತೆ. ಕಾಲಿಡಲಿಕ್ಕೆ ಜಾಗವಿಲ್ಲ. ಅವನಿಗೊಂದು ಉಪಾಯ ಹೊಳೆಯಿತು. ಒಂದು ರಬ್ಬರಿನದೊ ಅಥವಾ ಹಗ್ಗದ್ದೋ ಹಾವನ್ನು ಕೊನೆಯ ಬೋಗಿ ಒಳಕ್ಕೆ ಎಸೆದು "ಹಾವು, ಹಾವು" ಎಂದು ಕೂಗಾಡಿದನಂತೆ. ಜನರೆಲ್ಲಾ ಹೆದರಿ ಒಬ್ಬೊಬ್ಬರೆ ಇಳಿದುಹೋದರು. ಈಗ ಅವನಿಗೆ ಸಂದು ಸಿಕ್ಕಿತು. ಒಳಕ್ಕೆ ಹತ್ತಿ ಒಂದು ಮೇಲಿನ ಬರ್ತ್ (*Berth*)ನಲ್ಲಿ ಮಲಗಿ ಚೆನ್ನಾಗಿ ನಿದ್ದೆ ಮಾಡಿದನಂತೆ. ಬೆಳಗ್ಗೆ ಎದ್ದು ಕೆಳಗಿಳಿದು ಕಿಟಕಿಯಿಂದ ಹೊರಗೆ ನೋಡುತ್ತಾ ಒಬ್ಬ ಕೂಲಿಯವನೊಂದಿಗೆ "ಇದು ಯಾವ ಸ್ಟೇಷನ್" ಎಂದು ಕೇಳಿದ. "ಹುಬ್ಬಳ್ಳಿ" ಎಂದು ಉತ್ತರ ಬಂತು. "ಅಯ್ಯೋ! ರೈಲು ಬೆಂಗಳೂರಿಗೆ ಹೋಗಲಿಲ್ಲವಾ?" ಎಂದ. ಅದಕ್ಕೆ ಆ ಕೂಲಿಯವನು "ಅಯ್ಯಾ! ರೈಲು ರಾತ್ರಿಯೇ ಹೋಯಿತು. ಈ ಬೋಗಿಯಲ್ಲಿ ಹಾವಿದೆ ಎಂದು ಪ್ರಯಾಣಿಕರು ದೂರು ಕೊಟ್ಟಿದ್ದ ಕಾರಣ ಆಗಲೇ ಕಾಲ ಮೀರಿದ್ದರಿಂದ ಇದನ್ನು ಇಲ್ಲೇ ಬಿಟ್ಟು ಬೇರೆ ಡಬ್ಬಿಯನ್ನು ತಗುಲಿಸಿಕೊಂಡು ಹೋದರು. ರೈಲು ಇಷ್ಟೊತ್ತಿಗೆ ಬೆಂಗಳೂರನ್ನು ಸಮೀಪಿಸಿರಬಹುದು" ಎಂದನು. ಅದನ್ನು ಕೇಳಿ ಆ ಪ್ರಯಾಣಿಕನಿಗೆ ದಿಗ್ಭ್ರಮೆ ಆಯಿತು. ತಾನು ಮಾಡಿದ್ದು ತನಗೇ ಮೋಸವಾಯಿತು.

ಅತ್ಯುತ್ಕಟೈಃ ಪುಣ್ಯಪಾಪೈಃ ಇಹೈವ ಫಲಮಶ್ನುತೇ—ಪುಣ್ಯವಾಗಲಿ, ಪಾಪವಾಗಲಿ ಬಹಳ ತೀವ್ರವಾಗಿದ್ದರೆ ಅದರ ಫಲಕ್ಕಾಗಿ ಮತ್ತೊಂದು ಜನ್ಮದವರೆಗೂ ಕಾಯಬೇಕಾಗಿರುವುದಿಲ್ಲ. ಪಾಪಪುಣ್ಯಗಳ ತೀವ್ರತೆಯನ್ನನುಸರಿಸಿ ಮೂರು ವರ್ಷಗಳಲ್ಲಿಯೋ, ಮೂರು ತಿಂಗಳಲ್ಲಿಯೋ, ಮೂರು ವಾರಗಳಲ್ಲಿಯೋ, ಮೂರು ದಿನಗಳಲ್ಲಿಯೋ ಅದರ ಫಲವು ಆಗಿಬಿಡಬಹುದೆಂದು ಕರ್ಮದ ಮರ್ಮವನ್ನರಿತವರು ಹೇಳುತ್ತಾರೆ. ಇಂತಹ ಉದಾಹರಣೆಗಳು ಸಾಕಷ್ಟು ಕೇಳಿಬರುತ್ತವೆ. ನೀವೂ ಎಷ್ಟೋ ಕೇಳಿರಬಹುದು. ಈ ಕರ್ಮನಿಯತಿ ಒಬ್ಬ ವ್ಯಕ್ತಿಗೆ ಮಾತ್ರವೇ ಅಲ್ಲದೆ, ಒಂದು ಕುಟುಂಬ, ಒಂದು ವಂಶ, ಒಂದು ಜಾತಿ, ಒಂದು ಕುಲ, ಒಂದು ದೇಶ, ಜನಾಂಗ ಸಮಾಜಗಳಿಗೂ ಸಮಷ್ಟಿಯಾಗಿ ಅನ್ವಯಿಸುತ್ತದೆ. ಹಿಂದೆ ಒಂದು ಕಾಲದಲ್ಲಿ ಉನ್ನತವರ್ಗದವರು ಎಂದು ಅನ್ನಿಸಿಕೊಂಡವರು, ಅಂತ್ಯಜಾತಿಗಳವರನ್ನು ಹೀನವಾಗಿ ಕಂಡು ನಾನಾ ಹಿಂಸೆ ಕೊಟ್ಟಿದ್ದರು. ಅದರ ಪರಿಣಾಮವಾಗಿ ಈಗಿನ ಉನ್ನತವರ್ಗದವರು ಆ ನೊಂದ ದಲಿತರಿಂದಲೇ ನೋವನ್ನು ಅನುಭವಿಸಬೇಕಾದ ಪರಿಸ್ಥಿತಿ ಏರ್ಪಡುತ್ತಿದೆ. ಜಾತಿ, ದೇಶಗಳ ವಿಷಯದಲ್ಲಿಯೂ ಈ ನಿಯಮ ಅಪ್ರತಿಹತವಾಗಿ ವರ್ತಿಸುತ್ತದೆ.

> ನಾವೇ ಎಲ್ಲಕ್ಕೂ ಹೊಣೆಗಾರರಾದಾಗ ನಾವು ನಮ್ಮ ಶೀಲದ ಭವ್ಯ ಶಿಖರಕ್ಕೆ ಏರುತ್ತೇವೆ. ನನ್ನ ಅದೃಷ್ಟಕ್ಕೆ ನಾನೇ ಹೊಣೆ.
>
> —*ಸ್ವಾಮಿ ವಿವೇಕಾನಂದ*

ಒಂದು ವಂಶ ಅಥವಾ ಜಾತಿಗಳಲ್ಲಿ ಒಬ್ಬರು ಮಾಡಿದ ಸತ್ಕರ್ಮದಿಂದಾಗಿ ಅನೇಕರಿಗೆ ಗೌರವವು ದೊರೆಯುತ್ತದೆ. ಗೀತಾ ಸ್ವಾಮಿಗಳೆಂದು ಖ್ಯಾತರಾಗಿದ್ದ ಶಂಕರಾನಂದ ಸ್ವಾಮಿಗಳು ಒಂದು ಕಥೆಯನ್ನು ಅತ್ಯಂತ ವಿನಮ್ರವಾಗಿ ತಮ್ಮ ಗೀತಾ ಪ್ರವಚನದಲ್ಲಿ ಹೇಳಿರುವುದನ್ನು ಅವರ ಮಾತಿನಲ್ಲೇ ಇಲ್ಲಿ ಉಲ್ಲೇಖಿಸುವುದು ಪ್ರಸ್ತುತ: "ಪ್ರಿಯಾತ್ಮಸ್ವರೂಪಿಗಳೇ, ರಾಮ-ರಾವಣ ಯುದ್ಧವು ಮುಗಿದುಹೋಗಿ ಬಹಳ ವರ್ಷಗಳೇ ಕಳೆದುಹೋಗಿದ್ದವು. ರಾಮನ ಅವತಾರವೂ ಸಮಾಪ್ತಿಯಾಗಿತ್ತು. ಆಗ ಒಮ್ಮೆ ಒಂದು ಕೋತಿಯು ಲಂಕೆಗೆ ಹೇಗೋ ಹೋಯಿತಂತೆ. ಆಗ ಅಲ್ಲಿ ಚಿರಂಜೀವಿಯಾಗಿ ಲಂಕೆಯನ್ನಾಳುತ್ತಿದ್ದ ವಿಭೀಷಣನು ಆ ಕೋತಿಯನ್ನು ಹಿಡಿದು ಮಂಗಳದ್ರವ್ಯಗಳಿಂದ ಸ್ನಾನ ಮಾಡಿಸಿ ಪೀತಾಂಬರಗಳಿಂದಲೂ ರತ್ನವೈಢೂರ್ಯಗಳಿಂದಲೂ ಅಲಂಕರಿಸಿ ದೊಡ್ಡದಾದ ರಥದಲ್ಲಿ ಮೆರವಣಿಗೆಯನ್ನು ಮಾಡಿ ಗೌರವಿಸಿದನಂತೆ. ಹಿಂದೆ ಆಂಜನೇಯನು ಮಾಡಿದ ಉಪಕಾರವನ್ನು ಸ್ಮರಿಸುತ್ತಾ ಅದೇ ಆಕಾರದಲ್ಲಿರುವ ಈ ಕೋತಿಗೆ ಸತ್ಕಾರಗಳನ್ನು ಮಾಡಿದನಂತೆ. ಅದರಂತೆ ಆತ್ಮೀಯರೇ, ಹಿಂದೆ ಈ ಕಾವಿವಸ್ತ್ರಗಳಲ್ಲಿದ್ದ ಶ್ರೀಶಂಕರಾಚಾರ್ಯರು, ಶ್ರೀ ವಿವೇಕಾನಂದಸ್ವಾಮಿಗಳು ಮುಂತಾದವರು ಲೋಕಕ್ಕೆ ತಮ್ಮ ಬೋಧನೆಗಳಿಂದ ಸೇವೆ ಮಾಡಿದ್ದಾರೆ. ನೀವು ಆ ಕಾವಿ ಬಟ್ಟೆಯನ್ನು ನಮ್ಮ ಮೈಮೇಲೆ ನೋಡಿ ನಮ್ಮನ್ನು ಗೌರವಿಸುತ್ತಿದ್ದೀರಿ. ಈ ಗೌರವವು ಅವರಿಗೆ ಸಲ್ಲಬೇಕು, ನಮಗಲ್ಲ."

ಒಬ್ಬ ವಿವೇಕಾನಂದರಿಂದ ಎಲ್ಲ ಸಂನ್ಯಾಸಿಗಳಿಗೂ ಗೌರವ, ಒಬ್ಬ ಗಾಂಧಿಯಿಂದ ಭಾರತೀಯರೆಲ್ಲರಿಗೂ ಗೌರವ. ಒಬ್ಬ ರಘು ಮಹಾರಾಜನಿಂದ ಆ ವಂಶದವರೆಲ್ಲರಿಗೂ ಗೌರವ. ಸುಪುತ್ರಃ ಕುಲದೀಪಕಃ ಎನ್ನುತ್ತಾರೆ. ಆದುದರಿಂದ ಒಂದು ಕುಟುಂಬ, ವಂಶ, ಕುಲ, ಜಾತಿ, ದೇಶ, ರಾಷ್ಟ್ರಗಳ ಗೌರವವು ತನ್ನಿಂದ ಬೆಳೆಯುವಂತೆ ಮನುಷ್ಯನು ವರ್ತಿಸಬೇಕು. ತಾನು ಕೆಟ್ಟವನಾದರೆ ತನಗೆ ಮಾತ್ರವೇ ಅಲ್ಲದೆ ತನಗೆ ಸಂಬಂಧಿಸಿದ ಎಲ್ಲರ ಮೇಲೂ ಅದರ ಕಪ್ಪು ಛಾಯೆ ಬೀಳುತ್ತದೆಂಬುದನ್ನು ಮರೆಯಬಾರದು.

ರಾಮಾಯಣದಲ್ಲಿ ಒಂದು ವಿಷಯವಿದೆ. ಲಂಕೆಯನ್ನು ಹನುಮಂತನು ಸುಡಲಿಲ್ಲ. ಅವನು ಕೇವಲ ನಿಮಿತ್ತ ಮಾತ್ರ. ರಾವಣನು ಸೀತೆಯಲ್ಲಿ ಉಂಟುಮಾಡಿದ್ದ ಶೋಕಾಗ್ನಿಯು,

ರಾಮನಲ್ಲಿ ಉಂಟುಮಾಡಿದ್ದ ವಿರಹಾಗ್ನಿಯು ಲಂಕೆಯನ್ನು ಆಗಲೇ ಸುಟ್ಟು ಬೂದಿಮಾಡಿತ್ತು. ರಾವಣನ ಪಾಪವೇ ಲಂಕೆಯನ್ನು ನಾಶ ಮಾಡಿತ್ತು. ಭಸ್ಮಾಸುರನು ತಪಸ್ಸನ್ನು ಮಾಡಿ ತಾನು ಯಾರ ತಲೆಯ ಮೇಲೆ ಕೈಯಿಟ್ಟರೆ ಅವರು ಭಸ್ಮವಾಗಬೇಕೆಂದು ವರ ಪಡೆದನು. ಕೊನೆಗೆ ಅವನ ಕೈ ಅವನನ್ನೇ ಭಸ್ಮ ಮಾಡಿತು. ಇತರರ ನಾಶವನ್ನು ಕುರಿತು ಯೋಚಿಸುವವರು ತಮ್ಮಿಂದ ತಾವೇ ನಾಶವಾಗುತ್ತಾರೆ. **ವಿನಾಶ ಕಾಲೇ ವಿಪರೀತ ಬುದ್ಧಿಃ** ಎನ್ನುತ್ತಾರಲ್ಲವೇ?

ಧರ್ಮರಾಜನು ಆಜೀವನವು ಮಾಡಿದ ಧರ್ಮವೇ ನಾಯಿಯ ರೂಪದಿಂದ ಅವನನ್ನು ಹಿಂಬಾಲಿಸಿ ಅವನಿಗೆ ಸದ್ಗತಿಯನ್ನುಂಟು ಮಾಡಿತು. ಆದರೆ ಅವನು **ಅಶ್ವತ್ಥಾಮೋ ಹತಃ ಕುಂಜರಃ** ಎಂದು ಹೇಳಿದ್ದ ಮಾತಿನ ಫಲ ಅವನಿಗೆ ನರಕದರ್ಶನವನ್ನು ಮಾಡಿಸಿತು. ಆ ಮಾತು ಮೇಲ್ನೋಟಕ್ಕೆ ಸತ್ಯದಂತೆ ಕಂಡರೂ ಅದು ದ್ರೋಣನ ಸಾವಿಗೆ ಕಾರಣವಾಯಿತು. ಆದ್ದರಿಂದ ಧರ್ಮರಾಜನಿಗೆ ನರಕ ದರ್ಶನದ ಶಿಕ್ಷೆ ತಪ್ಪಲಿಲ್ಲ. ಒಳ್ಳೆಯದಕ್ಕೆ ಒಳ್ಳೆಯದು, ಕೆಟ್ಟದಕ್ಕೆ ಕೆಟ್ಟದ್ದು ಕಟ್ಟಿಟ್ಟ ಬುತ್ತಿ. ಧೃತರಾಷ್ಟ್ರನ ಅತಿಶಯವಾದ ಪುತ್ರ ವ್ಯಾಮೋಹದಿಂದಲೇ ಅವನು ದುಃಖಿತನಾದ. ದ್ರೋಣಾಚಾರ್ಯನು ಸಹ ಪುತ್ರವ್ಯಾಮೋಹಕ್ಕೆ ಬದ್ಧನಾಗಿದ್ದುದರಿಂದ ಯುದ್ಧದಲ್ಲಿ ಪುತ್ರನ ಸಾವಿನ ಮಿಥ್ಯಾವಾರ್ತೆಯಿಂದಲೇ ದುರ್ಬಲನಾಗಿ ಮೃತ್ಯುವಶನಾದ. ಅವರವರ ದೌರ್ಬಲ್ಯಗಳೇ ಅವರಿಗೆ ದುಃಖವನ್ನುಂಟುಮಾಡುತ್ತವೆ, ಮೃತ್ಯುವಾಗುತ್ತವೆ.

ಕರ್ಣನು ಪರಲೋಕ ಮಾರ್ಗದಲ್ಲಿ ಹೋಗುವಾಗ ಅವನಿಗೆ ದಾರಿಯಲ್ಲಿ ಅನೇಕರು ತಟ್ಟೆಗಳಲ್ಲಿ ಕರ್ಣಕುಂಡಲಗಳನ್ನು, ಆಭರಣ ಗಳನ್ನು, ಬಂಗಾರ ಮುಂತಾದವುಗಳನ್ನು ತಂದುಕೊಡುತ್ತಿದ್ದರು. ಹಸಿವಿನಿಂದ ಅವನು ಒದ್ದಾಡುತ್ತಿದ್ದರೂ ಯಾರೊಬ್ಬರೂ ಅವನಿಗೆ ಅನ್ನವನ್ನು ನೀಡಲಿಲ್ಲ. ಏಕೆಂದರೆ ಅವನು ಬದುಕಿರುವಾಗ ಎಲ್ಲಾ ದಾನಗಳನ್ನು ಮಾಡಿದ್ದರೂ ಅನ್ನದಾನವನ್ನು ಮಾಡಿರಲಿಲ್ಲವಂತೆ. ತಾನು ಕೊಟ್ಟದ್ದೇ ತನಗೆ. ಮನೆಯ ಮುಂದಕ್ಕೆ ಬರುವ ಭಿಕ್ಷುಕನು ಒಂದು ಪಾಠವನ್ನು ಹೇಳಲು ಬರುತ್ತಾನಂತೆ. ಏನು ಆ ಪಾಠ? **ದತ್ವಾ ತ್ವಂ ತ್ವಾದೃಶೋ ಭವ, ಅದತ್ವಾ ಮಾದೃಶೋ ಮಾ ಭೂಃ** —"ಕೊಟ್ಟು ನೀನು ನಿನ್ನಂತೆಯೇ ಇರು. ಕೊಡದೆ ನೀನು ನನ್ನಂತೆ ಆಗಬೇಡ" ಎಂದು. ಯಾರಾದರೂ ಧನವಂತರಾಗಿರುವವರನ್ನು ಕಂಡರೆ ಕೊಟ್ಟು ಹುಟ್ಟಿದರು ಎಂದು ಹೇಳುತ್ತಾರಲ್ಲವೇ?

ದ್ರೌಪದಿ ಒಂದು ಅಗಳು ಅನ್ನವನ್ನು ಕೃಷ್ಣಾರ್ಪಣ ಮಾಡಿದ್ದರಿಂದ ಅದು ಅನೇಕ ಸಾವಿರ ಶಿಷ್ಯಸಮೇತನಾಗಿ ಬಂದಿದ್ದ ದುರ್ವಾಸ ಮುನಿಯನ್ನು ತೃಪ್ತಿಪಡಿಸುವಷ್ಟು ಸಮೃದ್ಧವಾಯಿತು. ಹಿಂದಿನ ಜನ್ಮದಲ್ಲಿ ತನ್ನ ಸೆರಗನ್ನು ಹರಿದು ಒಬ್ಬ ಸಾಧುವಿನ ಮಾನರಕ್ಷಣೆಗಾಗಿ ಕೌಪೀನವಾಗಿ ಕೊಟ್ಟಿದ್ದರಿಂದ ಇಂದು ತನ್ನ ಮಾನರಕ್ಷಣೆಗೆ ಅಕ್ಷಯವಾದ ವಸ್ತ್ರಗಳು ಲಭ್ಯವಾದವು. ಶ್ರೀಕೃಷ್ಣನ ಬೆರಳಿಗೆ ಗಾಯವಾದಾಗ ತನ್ನ ಸೆರಗನ್ನೆ ಹರಿದು ಕಟ್ಟಿದಳೆಂಬ ಒಂದು ಕಥೆಯೂ ಪ್ರಸಿದ್ಧವಾಗಿದೆ. ಏನಾದರೆ ಏನು? ವಸ್ತ್ರದಾನವಂತೂ ಮಾಡಿದ್ದಳು. ಅದರ ಫಲವು ತನಗೆ ಅಕ್ಷಯ ವಸ್ತ್ರಪ್ರಾಪ್ತಿ, ಮಾನರಕ್ಷಣೆ.

ಶ್ರೀಕೃಷ್ಣಸುದಾಮರು ಸಾಂದೀಪಿನಿ ಮುನಿಯ ಗುರುಕುಲದಲ್ಲಿ ಓದುತ್ತಿದ್ದರು. ಒಂದು ದಿನ ಗುರುಮಾತೆಯು ಅವರಿಬ್ಬರನ್ನು ಸೌದೆ ತರಲು ಕಾಡಿಗೆ ಕಳುಹಿಸಿದಳು. ಅವರು ಹೊರಡುವಾಗ ಇಬ್ಬರೂ ತಿನ್ನಿರಿ ಎಂದು ಹೇಳಿ ಸ್ವಲ್ಪ ಅವಲಕ್ಕಿಯನ್ನು ಗಂಟುಕಟ್ಟಿ ಸುದಾಮನ ಕೈಯಲ್ಲಿಟ್ಟಳು. ಕೃಷ್ಣನು ಮರದ ಮೇಲೆ ಹತ್ತಿ ಒಣ ಕಟ್ಟಿಗೆಗಳನ್ನು ಆರಿಸಿ ಮುರಿಯುತ್ತಿರುವಾಗ ಸುದಾಮನು ಮರದ ಕೆಳಗೆ ಕುಳಿತು ಆ ಅವಲಕ್ಕಿಯನ್ನು ಪೂರ್ತಿಯಾಗಿ ತಾನೊಬ್ಬನೇ ತಿಂದುಬಿಟ್ಟನು. ಅದರಿಂದ ಅವನಿಗೆ ದಾರಿದ್ರ್ಯವು ವಕ್ಕರಿಸಿತು. ಸುದಾಮನು ಕುಚೇಲ (ಹರಿದ ಬಟ್ಟೆಯವನು) ಆಗಿಬಿಟ್ಟನು. ಮತ್ತೆ ಆ ಹಳೆಯ ಬಾಕಿಯನ್ನು (ಕೃಷ್ಣನ ಭಾಗದ ಅವಲಕ್ಕಿಯನ್ನು) ಸಲ್ಲಿಸಿದ ಮೇಲೆ ಪುನಃ ಸಂಪತ್ತು ಲಭ್ಯವಾಯಿತು. ಒಳ್ಳೆಯ ಕೆಲಸಗಳಿಗೆ ಅಡ್ಡಿ ಆತಂಕ ಗಳನ್ನು ಉಂಟುಮಾಡುವವರು ತಾವೇ ನಾಶವಾಗುತ್ತಾರೆ. ಬಲಿ ಚಕ್ರವರ್ತಿಯು ಪರಮಾತ್ಮನಿಗೆ ದಾನ ಮಾಡಲು ಸಂಕಲ್ಪಿಸಿ ಕೊಂಡನು. ಆದರೆ ಶುಕ್ರಾಚಾರ್ಯನು ಅದಕ್ಕೆ ಅಡ್ಡಗಾಲು ಹಾಕಲು ಪ್ರಯತ್ನಿಸಿದ. ತತ್ಫಲವಾಗಿ ಒಂದು ಕಣ್ಣನ್ನು ಕಳೆದುಕೊಂಡ. ದಾನ ಮಾಡುವವರಿಗೆ ಅಡ್ಡಗಾಲು ಹಾಕಿ ತಡೆಯುವವರಿಗೆ ಇಂಥಾ ಗತಿ ತಪ್ಪಿದ್ದಲ್ಲ.

> ನೀವು ಕೊಡುತ್ತಿದ್ದರೆ ಸಾಕು.
> ಕೇಳಬೇಕಾದ ಅವಶ್ಯಕತೆಯೇ ಇಲ್ಲ.
> ಬರಬೇಕಾದದ್ದು ತಾನಾಗಿಯೇ
> ಬರುತ್ತದೆ.

ನೀವು ಆರೋಗ್ಯವಾಗಿರಬೇಕಾದರೆ ಇತರರ ಆರೋಗ್ಯಕ್ಕಾಗಿ ಸಹಕರಿಸಿ, ಸಹಾಯವನ್ನು ಮಾಡಿರಿ. ನಿಮಗೆ ಶಾಂತಿ ಬೇಕಾದರೆ ಇತರರ ಶಾಂತಿಗೆ ಭಂಗವನ್ನುಂಟುಮಾಡಬೇಡಿ, ಸಾಧ್ಯವಾದರೆ ಸಹಕರಿಸಿ. ನೀವು ಧನವಂತರಾಗಬೇಕಾದರೆ ಇತರರೂ ಧನವನ್ನು ಸಂಪಾದಿಸಿಕೊಳ್ಳಲು ಅವರಿಗೆ ಅಡ್ಡಿಯಾಗದೆ ಅವಕಾಶ ಮಾಡಿಕೊಡಿ. ನಿಮ್ಮ ಕೈಲಾದ ಸಹಾಯವನ್ನು ಮಾಡಿ. ನಿಮಗೆ ಗೌರವ ಪ್ರತಿಷ್ಠೆಗಳು ಬೇಕಾದರೆ ಇತರರನ್ನು ಗೌರವಿಸುವುದನ್ನು ಕಲಿಯಿರಿ. ನಿಮಗೆ ವಿದ್ಯಾಲಾಭವಾಗಬೇಕಾದರೆ ಇತರರ ವಿದ್ಯಾಭಿವೃದ್ಧಿಗೆ ನೆರವಾಗಿ. ಇತರರಿಗೆ ನೀವು ಮಾಡಿದ್ದೇ ನಿಮಗೆ ತಿರುಗಿ ಬರುತ್ತದೆ. ಎಲ್ಲರ ಸೇವೆಯನ್ನು ಮಾಡಿ. ಯಾರನ್ನೂ ದ್ವೇಷಿಸದಿರಿ, ನಿಂದಿಸದಿರಿ. ಇದು ಅಪ್ರತಿಹತವಾದ ಪ್ರಕೃತಿನಿಯಮ.

ಈ ಮೇಲಿನ ಉದಾಹರಣೆಗಳನ್ನು ನೋಡಿದಾಗ ನಾವು ಮಾಡಿದ ಕರ್ಮವನ್ನು ಅನುಸರಿಸಿಯೇ ನಮಗೆ ಫಲಪ್ರಾಪ್ತಿ ಆಗುವುದೆಂದು ತಿಳಿದು ಬರುತ್ತದೆ. ಆದುದರಿಂದ ವಿವೇಕವಂತನಾದವನು ಸದಾ ಪುಣ್ಯ ಕರ್ಮಗಳನ್ನೇ ಮಾಡುತ್ತಿರಬೇಕು. **ಕರ್ಮ ಕರ್ಮಣಾ ನಶ್ಯತಿ** ಅಂದರೆ ಕರ್ಮದಿಂದ ಕರ್ಮನಾಶವಾಗುವುದೆಂಬುದು ಶ್ರುತಿ ವಾಕ್ಯ. ಮಲಿನವು ಮಲಿನದಿಂದಲೇ ಅಂದರೆ ವಸ್ತ್ರದಲ್ಲಿನ ಮಲಿನವು **ಚೌಳು** ಮಣ್ಣಿನಿಂದ ಶುದ್ಧವಾಗುವಂತೆಯೂ, ವಿಷವು ವಿಷದಿಂದಲೂ, ನಾಗಾಸ್ತ್ರವು ಗರುಡಾಸ್ತ್ರದಿಂದಲೂ, ಆಗ್ನೇಯಾಸ್ತ್ರವು **ವಾರುಣಾಸ್ತ್ರ**ದಿಂದಲೂ ತೊಲಗುವಂತೆ, ಅತಿಶಯವಾದ

ಮನುಷ್ಯನಿಂದ ಹೊರಗೆ ಹೋಗುವ ಪ್ರತಿಯೊಂದು ದ್ವೇಷದ ಆಲೋಚನೆಯೂ ಕೂಡ ಅಷ್ಟೇ ವೇಗವಾಗಿ ಪುನಃ ಅವನಲ್ಲಿಗೆ ಬರುವುದು. ಇದನ್ನು ಯಾವುದೂ ತಡೆಯಲಾರದು. ಇದರಂತೆಯೇ ಪ್ರತಿಯೊಂದು ಪ್ರೀತಿಯ ಭಾವನೆಯೂ ಕೂಡ ಅವನಲ್ಲಿಗೇ ಹಿಂದಿರುಗುವುದು.

—ಸ್ವಾಮಿ ವಿವೇಕಾನಂದ

ಪುಣ್ಯಕರ್ಮಗಳಿಂದ ಪಾಪ ದೋಷಗಳ ಪ್ರಭಾವವು ಕ್ಷೀಣವಾಗುತ್ತದೆ. ಆದುದರಿಂದ ಅಶುಭಕರ್ಮಗಳನ್ನು ಬಿಟ್ಟು ಶುಭಕರ್ಮಗಳನ್ನು ಆಚರಿಸಿ. ಅಧರ್ಮವನ್ನು ಬಿಟ್ಟು ಧರ್ಮವನ್ನೇ ಆಶ್ರಯಿಸಿ.

ಹಿಂಸೆಯು ಹಿಂಸೆಯನ್ನೂ ಕ್ರೋಧವು ಕ್ರೋಧವನ್ನೂ ದ್ವೇಷವು ದ್ವೇಷವನ್ನೂ ಲೋಭವು ಲೋಭವನ್ನೂ ವೃದ್ಧಿಗೊಳಿಸುತ್ತದೆ. ಶಾಂತಿಯು ಶಾಂತಿಯನ್ನೂ ಸ್ನೇಹವು ಸ್ನೇಹವನ್ನೂ ಪ್ರೇಮವು ಪ್ರೇಮವನ್ನೂ ತ್ಯಾಗವು ತ್ಯಾಗವನ್ನೂ ವೃದ್ಧಿಗೊಳಿಸುತ್ತದೆ. ಈ ನಿಯಮವನ್ನು ಸದಾ ನೆನಪಿನಲ್ಲಿಟ್ಟುಕೊಂಡು ಕರ್ಮನಿರತರಾಗಬೇಕು.

ಯಥಾ ಕರ್ಮ ತಥಾಗತಿಃ—ಕೃತಿಯಂತೆ ಗತಿ.

# ದೇವರ ರೊಟ್ಟಿ

—ರೆಬೆಕಾ (Rebecca)

ಬಾಲಕನೋರ್ವನು ತನ್ನ ಅಜ್ಜಿಗೆ ಪ್ರಪಂಚವೆಲ್ಲವೂ ಹೇಗೆ ಸಮಸ್ಯಾಮಯವಾಗುತ್ತಿದೆ ಎಂದು ಹೇಳುತ್ತಾ ತನ್ನ ಶಾಲೆಯ, ಮನೆಯ ಅನಾರೋಗ್ಯದ ಸಮಸ್ಯೆಗಳ ಬಗ್ಗೆ ಹೇಳತೊಡಗಿದನು. ಅಜ್ಜಿಯು ರೊಟ್ಟಿ (ಕೇಕ್) ಮಾಡುತ್ತಿದ್ದಳು.

"ರೊಟ್ಟಿ ತಿನ್ನುವೆಯಾ?" ಎಂದು ಕೇಳಿದಳು.

"ಖಂಡಿತವಾಗಿಯೂ ತಿನ್ನುವೆ" ಎಂದನು.

"ಇಗೋ, ಸ್ವಲ್ಪ ಈ ಎಣ್ಣೆ ಕುಡಿ."

"ಥೂ!" ಎಂದನು ಬಾಲಕ.

"ಹೋಗಲಿ, ಒಂದೆರಡು ಮೊಟ್ಟೆಗಳನ್ನಾದರೂ ತಿನ್ನು."

"ಓಕರಿಕೆ ಬರುವುದಜ್ಜಿ."

"ಸ್ವಲ್ಪ ಹಿಟ್ಟು ಕೊಡಲೇ? ಅಥವಾ ಸ್ವಲ್ಪ ಅಡುಗೆ ಸೋಡಾ ತಿನ್ನುವೆಯೋ?"

"ಅಜ್ಜಿ, ಅವೆಲ್ಲಾ ಅಸಹ್ಯಕರ!"

ಅದಕ್ಕೆ ಅಜ್ಜಿಯು "ಹೌದು, ಅವೆಲ್ಲಾ ಒಂದೊಂದನ್ನೇ ತೆಗೆದುಕೊಂಡರೆ ರುಚಿಯೆನಿಸುವುದಿಲ್ಲ. ಆದರೆ ಅವೆಲ್ಲವನ್ನೂ ಸಮಪ್ರಮಾಣದಲ್ಲಿ ಬೆರೆಸಿದರೆ ಸುಂದರವೂ, ರುಚಿಕರವೂ ಆದ ರೊಟ್ಟಿ ಆಗುವುದು. ದೇವರು ಎಲ್ಲಾ ಕೆಲಸಗಳನ್ನೂ ಹಾಗೆಯೇ ಮಾಡುತ್ತಾನೆ. ಎಷ್ಟೋ ಬಾರಿ ನಮಗನಿಸುವುದು ಏಕೆ ಇಷ್ಟೊಂದು ಕಷ್ಟ, ದುಃಖಗಳನ್ನು ಕೊಡುವನು ಎಂದು. ಆದರೆ ಆತನಿಗೆ ಗೊತ್ತು ಇವೆಲ್ಲವೂ ಮನುಷ್ಯನ ಒಳ್ಳೆಯದಕ್ಕಾಗಿಯೇ ಎಂದು. ನಾವು ಕೇವಲ ಆತನಲ್ಲಿ ನಂಬಿಕೆ ಇಡಬೇಕು, ಆಗ ಅವೆಲ್ಲವೂ ಒಂದು ಅದ್ಭುತವೆನಿಸುತ್ತವೆ !"

"ನಿನ್ನನ್ನು ಮಧುರವಾಗಿಸಲು ನಿನಗೆ ತುಂಬಾ ಸುಖ ಲಭಿಸಲಿ, ಶಕ್ತಿವಂತನನ್ನಾಗಿ ಮಾಡಲು ವಿಪತ್ತುಗಳು ಬರಲಿ, ಮಾನವೀಯನನ್ನಾಗಿ ಮಾಡಲು ದುಃಖಗಳು ಬರಲಿ ಮತ್ತು ಸದಾ ಸಂತೋಷವಾಗಿಡಲು ನಂಬಿಕೆಯು ಬೆಳೆಯಲಿ" ಎಂದು ಮನತುಂಬಿ ಆಶೀರ್ವದಿಸಿದಳು ಮೊಮ್ಮಗನನ್ನು ಆ ಜಾಣ ಅಜ್ಜಿ.

(ಕನ್ನಡಾನುವಾದ : ಸ್ವರ್ಣಗೌರಿ)